## ನನ್ನ ಕಥಾಪ್ರಸಂಗ

ಪ್ರತಿಯೊಬ್ಬ ಸೃಜನಶೀಲ ಲೇಖಕನಿಗೂ ಎರಡು ಬಗೆಯ ಬದುಕಿರುತ್ತದೆ. ಒಂದು ವಾಸ್ತವಿಕ ಬದುಕು (ಆಕ್ಚುಅಲ್ ಲೈಫ್), ಇನ್ನೊಂದು ಕಾಲ್ಪನಿಕ ಬದುಕು (ಇಮ್ಯಾಜಿನೇಟಿವ್ ಲೈಫ್). ಪ್ರತಿಭಾವಂತ ಲೇಖಕನೊಬ್ಬನ ಸೃಷ್ಟಿಕ್ರಿಯೆಯಲ್ಲಿ ಅವನ ವಾಸ್ತವಿಕ ಬದುಕಿನ ವ್ಯಕ್ತಿವಿಷಯಗಳು, ಪ್ರಸಂಗಗಳು ಅಥವಾ ವಿವರಗಳು ಅವನ ಕಾಲ್ಪನಿಕ ಬದುಕಿನ ಮೂಸೆಯಲ್ಲಿ ಎಷ್ಟು ರೂಪಾಂತರಗೊಳ್ಳಬೇಕೋ ಅಷ್ಟು ರೂಪಾಂತರಗೊಂಡೇ ಪ್ರಕಟವಾಗುತ್ತವೆ. ಹೀಗೆ ಪ್ರಕಟವಾದದ್ದು ವಾಸ್ತವ ಬದುಕಿನ ಸ್ಪರ್ಶವುಳ್ಳ, ಆದರೆ ಅದಕ್ಕಿಂತ ತೀರ ಭಿನ್ನವಾದ, ಅನುಭವದ್ರವ್ಯವಾಗಿರುತ್ತದೆ. ಕತೆಗಾರನಾದ ನಾನು ಪ್ರತಿಯೊಂದು ಕತೆ ಬರೆಯುವಾಗಲೂ ಅಂಥ ಅನುಭವದ್ರವ್ಯಕ್ಕಾಗಿ ಹಂಬಲಿಸುತ್ತಿರುತ್ತೇನೆ.

ಕನ್ನಡ ಕತೆಗಳನ್ನಲ್ಲದೆ, ಇಂಗ್ಲಿಷ್ ಭಾಷೆಯ ಮೂಲಕ ಜಗತ್ತಿನ ವಿವಿಧ ದೇಶಗಳ ಅನೇಕ ಕತೆಗಳನ್ನೂ ಓದಿರುವ ನಾನು, ನನಗೆ ಅರಿವಿಲ್ಲದಂತೆಯೇ, ಕತೆಯ ಶಿಲ್ಪಕ್ಕೆ ವಿಶೇಷ ಮಹತ್ವ ಕೊಡುವುದುಂಟು. ಕತೆಯೊಂದು, ಬಡಗಿ ತಯಾರಿಸುವ ಒಂದು ಟೇಬಲ್ಲಿನಂತೆಯೋ ಕುರ್ಚಿಯಂತೆಯೋ, ಪರಿಪೂರ್ಣವಾಗಬೇಕೆಂದು ಬಯಸುವುದರಲ್ಲಿ ತಪ್ಪೇನಿಲ್ಲ. ಅದೇ ರೀತಿ ಕತೆಗಾರನಾದವನು ಉಪಯೋಗಿಸುವ ಭಾಷೆ ಸೂಕ್ಷ್ಮವಾಗಿರಬೇಕು, ಧ್ವನಿಪೂರ್ಣವಾಗಿರಬೇಕು. ಎಷ್ಟೋ ವರ್ಷಗಳಿಂದ ನಮ್ಮ ಅತ್ಯುತ್ತಮ ಕಾವ್ಯವನ್ನು ಓದುತ್ತಿರುವ ನಾನು ಕತೆಯ ಭಾಷೆಯಲ್ಲಿ ಕಾವ್ಯದ ಉದ್ದೀಪಕ ಶಕ್ತಿಯಿದ್ದಷ್ಟೂ ಒಳ್ಳೆಯದೆಂದು ನಂಬಿರುವವನು. ಹಾಗಾಗಿ ಕತೆ ಬರೆಯುವಾಗ ಶಬ್ದಗಳನ್ನು ದುಂದುಮಾಡದೆ, ಸ್ವಲ್ಪಮಟ್ಟಿಗೆ ಪ್ರಜ್ಞಾಪೂರ್ವಕವಾಗಿಯೇ ಬಳಸುತ್ತೇನೆನ್ನಬಹುದು. ನನ್ನ 'ಆಯ್ದ ಕತೆಗಳು' ಸಂಕಲನಕ್ಕೆ ಮುನ್ನುಡಿ ಬರೆಯುತ್ತ ಜಿ. ರಾಜಶೇಖರ್, ನನ್ನ "ಕತೆಗಳು ಸಾರರೂಪಿಯಾದ ವಿವರಗಳಿಂದ ಕಟ್ಟಿದ ರಚನೆಗಳು. ಭಾಷೆಯ ಬಳಕೆಯಲ್ಲಿ ದಿವಾಕರ್ ಮಹಾ ಮಿತವ್ಯಯಿ; ಅನವಶ್ಯಕವಾಗಿ ಅವರು ಒಂದು ಮಾತು, ಯಾಕೆ, ಒಂದು ಶಬ್ದವನ್ನೂ ಬಳಸುವವರಲ್ಲ. ಈ ಹ್ರಸ್ವತೆಯ ಜೊತೆ ಅವರ ಕತೆಗಳಲ್ಲಿ ಪಾತ್ರಗಳು, ನೆನಪುಗಳು, ಘಟನೆಗಳು, ಊರು, ಕೇರಿ, ಕೊಳೆಗೇರಿ, ಜನಜಂಗುಳಿ, ಬಿಸಿಲು, ದೂಳು, ವಾಸನೆ ಎಲ್ಲವೂ ಒಟ್ಟಾಗಿ ಬದುಕಿನ ಲಯವನ್ನು ರೂಪಿಸುತ್ತವೆ" ಎಂದು ಸರಿಯಾಗಿಯೇ ಅಭಿಪ್ರಾಯಪಟ್ಟಿದ್ದಾರೆ.

ಕತೆಗಾರರು ಯಾವ ಪ್ರೇರಣೆಯಿಂದ ಕತೆ ಬರೆಯುತ್ತಾರೆ? ಸ್ವಾನುಭವದಿಂದ ಹೇಳುವುದಾದರೆ, ನಾನು ನನ್ನದೊಂದು ನಿಲುವನ್ನೋ ವಿಚಾರವೊಂದನ್ನೋ ಪಡಿಮೂಡಿಸುವುದಕ್ಕಾಗಿ ಕತೆ ಬರೆದದ್ದೇ ಇಲ್ಲ. ನಿಜ ಜೀವನದ ಯಾವುದೋ ಘಟನೆ, ಕಣ್ಣಿಗೆ ಕಟ್ಟಿದ ಯಾವುದೋ ಒಂದು ದೃಶ್ಯ, ಮನಸ್ಸನ್ನು ಆಕರ್ಷಿಸಿದ ಯಾರದೋ ವ್ಯಕ್ತಿವಿಶೇಷ, ಚಲನಚಿತ್ರದ ಒಂದು ಚಿತ್ರಿಕೆ, ಸಂಗೀತದ ಅಮೂರ್ತ ಅನುಭವ, ಹೀಗೆ ಯಾವುದಾದರೊಂದು ನನ್ನ ಕತೆಯ ಮುನ್ನಡೆಗೆ ಒಂದು ಚಿಮ್ಮುಹಲಗೆಯಾಗಬಹುದು. ಇಷ್ಟಕ್ಕೂ ಒಂದು ಕತೆ ಹೇಗೆ ರೂಪುಗೊಂಡಿತೆಂದು ಕತೆಗಾರನೇ ಕರಾರುವಾಕ್ಕಾಗಿ ಹೇಳಲು ಸಾಧ್ಯವೆ? ಮತ್ತೆ ರೂಪುಗೊಂಡ ಕತೆಯಲ್ಲಿ ವಾಸ್ತವವೆಷ್ಟು, ಕಾಲ್ಪನಿಕವೆಷ್ಟು ಎಂದು ವಿಂಗಡಿಸಲಾದೀತೆ?

ಸ್ಪಷ್ಟವಾಗಿರುವುದನ್ನು ವಿವರಿಸುವುದು ಸುಲಭವಲ್ಲ. ಸಣ್ಣಕತೆ ಎಂದರೇನು? ಅಮೆರಿಕನ್ ಕತೆಗಾರ್ತಿ ಫ್ಲಾನೆರಿ ಓ'ಕೋನರ್ ಒಂದು ಸಂದರ್ಭದಲ್ಲಿ ಸಣ್ಣಕತೆಯನ್ನು ವಿವರಿಸಿದ್ದು ಹೀಗೆ: "ಯಾವುದು ಸಣ್ಣಕತೆಯಲ್ಲ ಎಂದು ಸುಲಭವಾಗಿ ಹೇಳಬಲ್ಲೆ ನಾನು. ಸಣ್ಣಕತೆ ಒಂದು ನಗೆಹನಿಯಲ್ಲ, ಸ್ವಾರಸ್ಯಕರ ಸಂಗತಿಯಲ್ಲ, ಗದ್ಯದಲ್ಲಿರುವ ಭಾವಗೀತೆಯಲ್ಲ. ಅದೊಂದು